ಶ್ರೀ ಎಂ. ಮಳ್ಳೂರು ಆನಂದರಾವ್.—ನಮ್ಮ ರಾಜ್ಯದಲ್ಲಿ ರೇಷ್ಮೆ ಉದ್ದಿಮೆ ಸಾವು ಬದುಕಿನ ಹಂತದಲ್ಲಿದೆ. ಎಲ್ಲಾ ರೇಷ್ಮೆ ಬೆಳೆಯನ್ನು ಬೆಳೆಯತಕ್ಕಂಥವರು ಆ ಬೆಳೆಯನ್ನು ತೆಗೆದು ಹಾಕುತ್ತಿರುವಂಥ ಸಂದರ್ಭದಲ್ಲಿ ಅದನ್ನು ಉಳಿಸುವುದಕ್ಕೆ ತಾವು ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳದೇ ಇವತ್ತಿನ ದಿವಸ ವಿಶ್ವಬ್ಯಾಂಕಿನಿಂದ ೧ ಕೋಟಿ ೩೦ ಲಕ್ಷ ರೂ. ಗಳ ಹಣವನ್ನು ಪಡೆದು ಕೇವಲ ಅದರ ಬಗ್ಗೆ ರೀಸರ್ಚ್ ಮಾಡುವುದಕ್ಕೆ ಮತ್ತು ಕಟ್ಟಡ ಕಟ್ಟಿಸುವುದಕ್ಕೆ ಮತ್ತು ಸಿಬ್ಬಂದಿಗೋಸ್ಕರವಾಗಿ ಖರ್ಚು ಮಾಡುತ್ತಿದ್ದೀರಾ? ಆದುದರಿಂದ ಈ ರೇಷ್ಮೆ ಉದ್ದಿಮೆಗೂ ಮತ್ತು ವಿಶ್ವವಿದ್ಯಾನಿಲಯಗಳಿಗೂ ಏನು ಸಂಬಂಧವಿದೆ? ಏತಕ್ಕೆ ಅಷ್ಟು ದಂಡನ್ನು ಕೊಟ್ಟಿದ್ದೀರಿ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಶ್ರೀ ಮಳ್ಳೂರು ಆನಂದರಾವ್ ರವರು ರೇಷ್ಮೆ ಉದ್ದಿಮೆ ಸಾವಿನ ದವಡೆಯಲ್ಲಿ ಇದೆಯೆಂದು ಹೇಳಿದರು ಆದರೆ ಅದು ಬಹಳ ಚಿನ್ನಾಗಿದೆ. ಆದರೆ ಊಜಿ ಹಾವಳಿ ಬಂದಿದೆ...but we have already decided to live with it and sustian our industry. ನಾವು ಇಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮಳ್ಳೂರು ಆನಂದರಾಯರು ಸೈನ್ಸ್ ಸ್ಟೂಡೆಂಟ್ ಏನೋ ಗೊತ್ತಿಲ್ಲ. ಆದರೂ ಕೂಡ ನನಗೆ ಗೊತ್ತಿದ್ದ ಹಾಗೆ ಯೂನಿವರ್ಸಿಟಿಗಳಲ್ಲಿ ಹೊಸ ಕರುಕ್ಯುಲಂಗಳನ್ನು ಇಂಟರ್‌ಡ್ಯೂಜ್ ಮಾಡುವುದು ಇರುತ್ತದೆ.

Survey of Hydro Electric Plan in Coorg District.

687 SRI D. JAYADEVARAJ URS (Chamundeshwari).—Will the Minister of State for Power be pleased to state :—

(a) whether survey has been conducted on Burfa Stream water which flows towards western direction in Kodagu;

(b) if so, the estimated cost of this project?

SRI G. H. ASWATHA REDDY (Minister of State for Power).—

(a) There is no river by name Burfa in Kodagu District. The river called Baraphole is flowing. Survey is being conducted in this river to generate electricity.

(b) Detailed estimated cost has not so far been prepared. The approximate cost is about Rs. 120 crores. (Rupees one hundred and twenty crores).

ಶ್ರೀ ಡಿ. ಜಯದೇವರಾಜ್ ಅರಸ್.—ಸ್ವಾಮಿ ಡಿಟೇಲ್ ಎಸ್ಟಿಮೇಟ್ ಯಾವಾಗ ಮಾಡುತ್ತೀರಿ? ಮತ್ತು ಎಷ್ಟು ಮೆಗಾವ್ಯಾಟ್ ವಿದ್ಯುಚ್ಛಕ್ತಿ ಆದರಿಂದ ಉತ್ಪಾದನೆಯಾಗುತ್ತದೆಂಬುದನ್ನು ತಿಳಿಸುತ್ತೀರಾ?

ಶ್ರೀ ಜಿ. ಎಚ್. ಅಶ್ವತ್ಥ್ ರೆಡ್ಡಿ.—ಅಧ್ಯಕ್ಷರೇ, ಇನ್‌ವೆಸ್ಟಿಗೇಷನ್ ಪೂರ್ಣಗೊಂಡಿಲ್ಲ, ಆದರೂ ಕೂಡ ಅಂದಾಜು ವೆಚ್ಚ ೧೨೦ ಕೋಟಿ ಎಂದು ಹೇಳಿದ್ದೇನೆ. ಈಗಿನ ವೆಚ್ಚ ಸುಮಾರು ೨೦೦ ಕೋಟಿ ಆಗುತ್ತದೆ. ಮತ್ತೆ ಆದರಿಂದ ೧೮೦ ಮೆಗಾವ್ಯಾಟ್ ಕರೆಂಟ್ ಬರುತ್ತದೆ.

ಶ್ರೀ ಡಿ. ಜಯದೇವರಾಜ್ ಅರಸ್.—ಹಾಗಿದ್ದ ಮೇಲೆ ತಾವು ಈ ಯೋಜನೆಯನ್ನು ಕೈಗೊಂಡರೆ ನಮ್ಮ ಕಾವೇರಿ ಬೇಸಿನ್‌ಗೂ ಸಾಕಷ್ಟು ನೀರು ಬರುತ್ತದೆ ಮತ್ತು ವಿದ್ಯುಚ್ಛಕ್ತಿ ಕೂಡ ಬರುವುದರಿಂದ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಾ?

ಶ್ರೀ ಜಿ ಎಚ್. ಅಶ್ವತ್ಥ್ ರೆಡ್ಡಿ.—ಅಧ್ಯಕ್ಷರೇ, ಈ ಬಾರಾಪೊಲೆ ನದಿ ಅಲ್ಲಿಂದ ಹರಿದು ಕೇರಳದ ಮುಖಾಂತರ ಅರಬ್ಬಿ ಸಮುದ್ರಕ್ಕೆ ಹೋಗಿ ಸೇರುತ್ತಿತ್ತು. ಆದುದರಿಂದ ಆ ರೀತಿ ಸಮುದ್ರಕ್ಕೆ ಹೋಗುವ ಬದಲು ಅದೇ ನೀರನ್ನು ತಿರುಗಿಸಿಕೊಂಡರೆ ೧೬ ಟಿ. ಎಂ. ಸಿ. ಎಫ್. ಟಿ. ಯಷ್ಟು ನೀರು

ದೊರೆಯುತ್ತದೆ ಮತ್ತು ಆದರಿಂದ ೧ ಲಕ್ಷ ಎಕರೆಗೆ ನೀರಾವರಿಗೆ ಅನುಕೂಲ ವಾಗುತ್ತದೆ. ಪವರ್ ಜನರೇಟ್ ಕೂಡ ಮಾಡುವುದಕ್ಕೂ ಅನುಕೂಲವಾಗುತ್ತದೆ, ಆದುದರಿಂದ ಇದರ ಬಗ್ಗೆ ಇನ್ನೂ ಅಂತಿಮವಾಗಿ ಇನ್‌ವೆಸ್ಟಿಗೇಷನ್ ಪೂರ್ಣಗೊಂಡಿಲ್ಲ.

ಶ್ರೀ. ಎಚ್. ಎಲ್. ತಿಮ್ಮೇಗೌಡ.—ಬಾರಾಪೊಲೆ ನದಿ ಎನಿದೆ ಇದು ಕೊಡಗು ಜಿಲ್ಲೆಯಲ್ಲಿದೆ' ಕೊಡಗು ಬೇರೆ ಪ್ರಾಂತವಾಗಿದ್ದಾಗ ಅಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮಾಡಬೇಕೆಂದು ಆಗಿತ್ತು. ಆದರೆ ಇತ್ತೀಚೆಗೆ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಮಾಡುವುದನ್ನು ಬಿಡಲಾಗಿತ್ತು. ಆದರೆ ತಾವು ಹೇಳತಕ್ಕದ್ದರ ಪ್ರಕಾರ ಸವಂದ್ರಕ್ಕೆ ನೀರು ಬಿಡುತ್ತಿರುವುದನ್ನು ಉಪಯೋಗಿಸಿ ಕೊಂಡು ಎಲೆಕ್ಟ್ರಿಸಿಟಿ ಪ್ರಡ್ಯೂಜ್ ಮಾಡತಕ್ಕ ಯೋಜನೆಯನ್ನು ಹಿಂದಿನ ಸರ್ಕಾರ ಕೈ ಬಿಟ್ಟಿತು ಆದರ ಬದಲು ಕಕ್ಕೆಟ್ ಹೊಳೆ ಪ್ರಾಜೆಕ್ಟ್‌ನ ಬಗ್ಗೆ ಸರ್ವೆ ಆಗಿದೆ. ಎಸ್ಟಿಮೇಟ್ ಕೂಡ ಆಗಿದೆ ಎಂದು ಹೇಳತಕ್ಕಂಥದ್ದು ಸರ್ಕಾರ ದವರ ಗಮನಕ್ಕೆ ಬಂದಿಲ್ಲವೇ ? ಅಥವಾ ಕಕ್ಕಟ್ ಹೊಳೆ ಪ್ರಾಜೆಕ್ಟ್‌ನ್ನು ಮಾಡತಕ್ಕದ್ದು ಸರ್ಕಾರದವರ ಗಮನದಲ್ಲಿ ಇಲ್ಲವೇ ಎನ್ನುವ ಬಗ್ಗೆ ಆಪ್ಪಣೆ ಕೊಡಬೇಕು.

ಶ್ರೀ ಜಿ. ಎಚ್. ಆಶ್ವತ್ ರೆಡ್ಡಿ.—ಅಧ್ಯಕ್ಷರೇ ನಮ್ಮ ಸರ್ಕಾರ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬೇಕು ಎನ್ನತಕ್ಕ ಆಶೆಯನ್ನು ಹೊಂದಿದೆ ಅದಕ್ಕೆ ಕೆಲವು ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಈ ಪ್ರಾಜೆಕ್ಟ್‌ನಿಂದ ನೀರಾವರಿಗೂ ಅನುಕೂಲವಾಗುತ್ತದೆ ಮತ್ತು ವಿದ್ಯುಚ್ಛಕ್ತಿ ಕೂಡ ಉತ್ಪತ್ತಿ ಯಾಗುತ್ತದೆ ಎನ್ನತಕ್ಕ ಉದ್ದೇಶವನ್ನು ಹೊಂದಿದ್ದೇವೆ, ಆದರೆ ಈ ಬಾರಾಪೊಲೆ ನದಿ ಯೋಜನೆ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಿಲ್ಲ ಆದರ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಿ ಅಂತಿಮವಾದ ತೀರ್ಮಾನಕ್ಕೆ ಬರುತ್ತೇನೆ.

Completion of Belgaum Kadota Road

569 Sri G. L. Ashtekar (Bagewadi).—Will the Minister for Public Works be pleased to state.—

(a) whether Belgaum-Kadoti Road *Via* Market Yard Road has been completed according to the sanctioned estimate, C. D. works and asphalt ;

(b) the width of asphalt road ;

(c) whether it is not a fact that an assurance was made by the Minister for widening the width of the said road ;

(d) if so, the action taken by the Government in that behalf ?

Sri Kagodu Thimmappa (Minister for Public Works).—

(a) Yes.

(b) (c) and (d) 2.75 metres, From the relevant documents it has not been possible to locate such an assurance. However, efforts are continuing in this regard.

Sri G. L. Ashtekar.—Sir, what is the estimated cost of Belgaum-Kadote road including C. D. works and asphalt ?

Sri M. Veerappa Moily (on behalf of the Minister for Public Works).—The estimated cost is of the order of Rs. 3,95,000 including C. D. works and asphalt.